ಪಿಡಬ್ಲೂ-1 ಅಮಲು ಜಾರಿ ಸಂಖ್ಯೆ.9/2012

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.18.01.2024**

**ಪಾಟಿ ಸವಾಲುಃ ತೀರ್ಪುಋಣಿ ಪರ ಶ್ರೀಮತಿ. ಕೆ ಎಸ್ ವಕೀಲರಿಂದಃ**

1. ನಾನು ಡಿಪ್ಲೋಮ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಡಿಕ್ರಿದಾರರಿಗೂ ನನಗೂ ಯಾವುದೇ ಸಂಬಂದ ಇರುವುದಿಲ್ಲ. ಸದರಿಯವರ ವಿಳಾಸ ತುಮಕೂರು ರೈಲ್ವೆ ನಿಲ್ದಾಣ, ರೈಲ್ವೆ ಗೂಡ್ ಶೆಡ್ ನಲ್ಲಿ ಇರುತ್ತದೆ. ನಾನು ರಾಜಾಜಿನಗರದಲ್ಲಿ ವಾಸವಾಗಿರುತ್ತೇನೆ. ಅಸಲು ದಾವಾ ಸಂಖ್ಯೆ.343/2010 ನ್ನು 5 ಆಸ್ತಿಗಳಿಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ಸದರಿ ದಾವೆಗಳನ್ನು ನಾನು ಜಿಪಿಎ ಪಡೆದು ಮುನ್ನೆಡೆಸಿದ್ದೇನೆ ಎಂದರೆ ಸರಿ. ಆ ಎಲ್ಲಾ 5 ಆಸ್ತಿಗಳ ಆಗು ಹೋಗುಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ಆ ಕಾರಣದಿಂದ ಡಿಕ್ರಿದಾರರು ಸದರಿ ಜಮೀನುಗಳ ಉಳಿಮೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾನು ಕರೆದಾಗ ಬರುತ್ತಾರೆ ಎಂದು ನುಡಿಯುತ್ತಾರೆ. ಮೇಲ್ಕಂಡ ಎಲ್ಲಾ ಆಸ್ತಿಗಳನ್ನು ನಾನು ಡಿಕ್ರಿದಾರರಿಗೆ ಮಾರಾಟ ಮಾಡಿದ್ದ ಕಾರಣ ಅವುಗಳನ್ನು ನಾನೇ ನೋಡಿಕೊಳ್ಳುವಂತೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ಆ ರೀತಿ ಅಧಿಕಾರ ಪತ್ರದಲ್ಲಿ ಬಂದ ಆದಾಯವನ್ನು ವಿಲೇವಾರಿ ಮಾಡುವಂತೆ ತಿಳಿಸಿದ್ದಾರೆ ಎಂದರೆ ಸಾಕ್ಷಿ ಮರೆತು ಹೋಗಿದೆ ಎಂದು ನುಡಿಯುತ್ತಾರೆ.

2. ಅಸಲು ದಾವಾ ಸಂಖ್ಯೆ.343/2010 ರ ತೀರ್ಪು ಮತ್ತು ಡಿಕ್ರಿಯನ್ನು ತೀರ್ಪುಋಣಿ ರವರು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಸದರಿ ದಾವೆ ತೀರ್ಮಾನ ಆಗುವ ಮೊದಲು ನಾನು ತೀರ್ಪುಋಣಿ ಗಳ ವಿರುದ್ದ 2 ಬಾರಿ ದೂರು ನೀಡಿರುತ್ತೇನೆ. ಸದರಿ ತೀರ್ಪು ಮತ್ತು ಡಿಕ್ರಿ ಆದ ನಂತರ ತೀರ್ಪುಋಣಿಗಳು ಜಮೀನಿನ ಬಳಿ ಬಂದು ಈಗುಲೂ ಸಹ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಈ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ರಜನಿ ಎಂಬುವವರು ನನ್ನ ಮತ್ತು ಡಿಕ್ರಿದಾರರ ಪರ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.313/2010 ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯ ಸರ್ವೆ ನಂ.138/ಪಿ22 ಎಂದರೆ ಸರಿ. ಸದರಿ ಆಸ್ತಿಯನ್ನು ಸೇರಿ ಅಸಲು

ದಾವಾ ಸಂಖ್ಯೆ.343/2010 ದಾವೆ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ.313/2010 ರಜನಿಯವರ ಪರವಾಗಿ ನ್ಯಾಯಾಲಯದಲ್ಲಿ ಡಿಕ್ರಿ ಆಗಿದೆ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**